Lahari
# Communique
NEWS LETTER FOR PRIVATE CIRCULATION AMONG THE LEGAL FRATERNITY

Volume 13 | May 2001 | Part 2

## Communique Poll

With effect from 14-5-2001 working hours of the Sub ordinate Courts and its offices in Karnataka have been revised. No doubt there is a lot of resentment about the revised working hours. However, Communique has undertaken this poll to seek the opinion of all the concerned regarding the continuance of the revised working hours or otherwise. Judges, employees of judicial department, Lawyers, litigants and others who have a stake in the functioning of the Sub-ordinate courts in Karnataka are expected to take part in this opinion poll. You can freely express your views by sending a post card to Mr. K. Suryanarayana Rao, Advocate, *Prabhath Complex, K. G. Raod,* Bangalore-560 009 on or before 25th September 2001. For the purpose of convenience you are required to say whether the revised working hours are suitable or the previous working hours are suitable or you have no views to offer. - Editor

## Retirements

- Mr. Justice Harinath Tilhari, retired as a judge of the High Court of Karnataka on 10-5-2001.
- Mr. Justice T. N. Vallinayagam, retired as a judge of the High Court of Karnataka on 16-5-2001.

## Judge Transferred

Mr. Justice V. P. Mohan Kumar, Judge, Karnataka High Court has been transferred as a Judge of Kerala High Court on 30-5-2001. AAB had organised a farewell function at the High Court Unit on the eve of his relinquishment of office as a Judge of Karnataka High Court.

## New AG for Kerala

Mr. K. Rattan Singh has been appointed as the new Advocate General of Kerala consequent upon the UDF Government assuming power in the State.

## Move to set up special courts

The State Government has reportedly moved the Karnataka High Court to establish exclusive courts to deal with cases of atrocities against the persons belonging to Schedule Caste and Schedule Tribes. Atleast six special courts are expected to be set up inview of the increasing crimes against the members of SC and ST communities. It is to be noted that Andhra Pradesh has already established such special courts apart from mobile courts with a view to speedy disposal of the cases involving crimes against the deprived communities. Reportedly the number of cases of this nature in Karnataka has risen by 20% during the past year from around one thousand to one thousand two hundred cases.

## Judges appointed

President K. R. Narayanan appointed four new judges to Kolkata High Court and one addl. judge for Himachal Pradesh High Court on 14-5-2001. The newly appointed judges to the Kolkata High Court are Mr. Asit Kumar Bisi, Mr. Pradip Kumar Biswas, Mr. Alok Kumar Basu and Mr. Narayan Chandra Sil. Mr. Mangatram Verma has been appointed as Addl. Judge to HP. High Court for a period of two years with effect from May 17.

## Notaries Association

In the recently held conference of the Association of Notaries of Karnataka the following were unanimously elected as the office bearers. President : Sri H. S. Renuka Prasad, Bangalore ; Vice Presidents : Sri V. Prabhakara Hegde, Udupi, Sri S. S. Reddy, Raichur; Secretary : Sri V. Rangaramu, Bangalore; Joint Secretary : Sri B. K. Seetharama Rao ; Office Secretaries : Sri A. M. Ramamurthy Reddy, Sri H. S. Sakalesha Aradya, Smt. G. N. Vijayalakshmi, Sri Venkatachala pathi and Sri Samuel Soloman.

## Transfers / Postings

Consequent upon transfers/ postings the following changes have been brought about in respect of the judges of the Small Causes Courts, Bangalore, with effect from 25-5-2001.

SCCH1 Mr. K. N. Keshavanarayana vice Ms. B. S. Indrakala;

SCCH3 Mr. C. Guruswamy in existing vacancy;

SCCH6 Mr. H. M. Shivakumara Swamy vice Mr. S. B. Patil;

SCCH9 Ms. S. Savithri vinayaka vice Mr. M. S. Shankara Gulli;

SCCH18 Mr. K. N. Dharwadkar vice V. S. Dharwadkar.

## Book Released

In a function organised by AAB, Magistrate Courts Unit on 18-5-2001 Smt. Prema Cariappa, Mayor, BMP released a book "Kannada Nagara Sundara Nagara" (a collection of poems) authored by Sri B. V. Puttegowda, Advocate and former Mayor of BMP. Sri G. Narayana, Former Mayor, BMP and Dr. M. Chidananda Murthy, President, Karnataka Shakthi Kendra, Bangalore were the Chief Guests at the function, presided over by Sri Malleshaiah, President, AAB.

## Around the Courts

- **Article 129 of the Constitution of India - Use of a fabricated order for the purpose of benefiting students, amounts ro contempt of court ;**

A bench of the Apex Court comprising Mr. Justice G. B. Pattanaik and Mr. Justice B. N. Agrawal, ruled that use of a fabricated court order for the purpose of conferring some benefits on a group of students by way of compelling the State Government to hold an examination by itself amounts to pollute the course of justice and must be held to be a grave act of contempt. Delivering the judgment on a contempt petition on May 4, 2001 the bench said that "The sole object of the court wielding its power to punish for 'Contempt' is always for the course of administration of justice' (remaining pure) and "nothing is more incumbent upon the course of justice, than to preserve the proceedings from being misrepresented nor is there anything more pernicious when the order of the court is forged and produced to gain undue advantage". The bench held that both the secretary of a private Sports College of Yavatmal (Maharashtra) and an employee of the Nagpur bench of Bombay High Court to be guilty of criminal contempt and sentenced each of them to six months imprisonment.

**OWN YOUR OFFICE**

A fullfledged lawyers chamber measuring an extent of two square situated in third floor facing Avenue Road, fully furnished, library and telephone is available on ownership basis. It is situated 100 yards away from SBM Head Office. Interested persons are to contact (O) 2265847 (R) 6706888.

*Inaction without more is not tantamount to choice*
*- Benjamin N. Cardozo*

## FREQUENT CHANGES NEEDED

Often comments are heard in the Bar room that survival of lawyers on the criminal side depends on the pleasure of the court constable. More or less this grouse has proved to be true in respect of young lawyers. Quite often it is the police constable who entrust a case to the lawyer be it seeking bail, release of seized property or other petty cases. The court constable achieves this position over a period of time because of his continuous assignments of the court work by the concerned police station. This situation could be prevented by the police department if the constables assigned with the court work are quite often changed.

These court constables have also developed vested interest with regard to service of process, execution of warrants, securing of presence of prosecution witnesses, furnishing reports from the police station etc., thereby helping or delaying the court proceedings depending on the approachability of the litigants. Frequent changes in the posting of constables to courts could prevent such mischiefs. It is hoped that the Higher Authorities in the Police Department would take immediate action in this regard and thereby help the cause of justice.

## AVOIDABLE ORDEAL

Second Additional Family Court in Bangalore located in the first floor of City Civil Court complex is not ideally situated in as much as persons intend reaching court hall have to pass through the crowd outside the sessions court (CCH No. 2 and CCH No. 3) of whom substantial numbers are the under trials and the gun/rifle trotting police wallhas holding the former in hand cuffs/chains. Apart from them the crowd also comprises few lawyers and the ralatives/ associates of the undertrails. The whole scene prevailing is not congenial to the women folk, quite often accompanied by children, who have cases before this family court. Needless to state that it has resulted in some kind of revulsion amongst the fair section of litigants who are to attend this family court. By compulsion these women and children reach the court hall after passing through the crowded corridor in front of the sessions court. Will the authorities take pains to relocate this family court hall elsewhere so that the litigants, particularly women & children need not face this ordeal?

## Undue Burden

Courts and quasi judicial authorities are required to supply certified copies to the litigants. Certain fee is levied for this purpose based on the possible expenses which may be incurred for the preparation of certified copies. Perhaps no one would have expected that this process could be used as a source of earning additional revenue. The High Court of Karnataka is collecting fee of Rupees three per page for supplying the certified copies to the litigants apart from the fact that minimum of Rupees fifteen is collected een when the certified copy is less than five pages. Needless to state that this is causing avoidable financial burden on the litigants and the same is requied to be reddressed without delay. At the same time, the High Court also is expected to notify the litigants the rationale of collecting such exhorbitant fee for this purpose. Hope that the litigants would find an early response from the High Court.

Read Communique

## JUDICIAL ACTIVISM - USE AND ABUSE

A. N. Jayaram, Advocate General

*from the last issue*

The famous Justice Cardozo of the United States, views that judges do interpret the law and in the process, also make it, although as he calls it "interstitially–to fill up gaps. He indicates the limits within which judges must work :

"I do not mean, of course, that judges are commissioned to set aside existing rules at pleasure in favour of any other set of rules which they may hold to be expedient or wise. I mean that when they are called upon to say how far existing rules are to be extended or restricted, they must let the welfare of society fix the path, its directions and its distance."

The learned Jurist is also conscious of the fact that every Judge has a philosophy of his own which guides him in finding solutions to legal problems presented before them. To quote him :

"We are reminded by William James in a telling page of his lectures of Pragmatism that every one of us has in truth an underlying philosophy of life, even those of us to whom the names and the notions of philosophy are unknown or anathema. There is in each of us a stream of tendency, whether you choose to call it philosophy or not, which gives coherence and direction to thought and action. Judges cannot escape that current any more than other mortals. All their lives, forces which they do not recognize and cannot name, have been tugging at them– inherited instincts, traditional beliefs, acquired convictions; and the resultant is an outlook on life, a conception of social needs, a sense in James's phrase of 'the total push and pressure of the cosmos, which, when reasons are nicely balanced, must determine where choice shall fall. In this mental background every problem finds its setting. We may try to see things as objectively as we please. None the less, we can never see them with any eyes except our own."

Though the founding fathers placed the judiciary on a high pedestal, engrafting many provisions which fully safeguarded judicial independence, they did not think that the power of judicial Review was sacrosanct to such an extent that it constituted the sole measure of legality. In fact they took away exercise of such review in some matters eg: Articles 103(1), 136(2), 329(a), etc.

This approach was the reflection of the approach of Justice Homles of United States Supreme Court when he said :

"I do not think the United States would come to an end if we lost our power to declare an act of Congress void" (3) – Justice Holmes – collected papers.

The scheme of our Constitution makes distribution of powers amongst the Executive, Legislature and the Judiciary. Each organ is supreme within its allocated sphere and none can encroach upon the territory of the others. In fact if other organs overstep their limits, it is the judiciary which is approached for dealing with such transgression. If Courts themselves act beyond the powers assigned to them under the Constitution, who can maintain the constitutionally imposed limits?

*The peculiarly important power* and role of the judiciary would require it to exercise its powers as not to transgress its limits.

The growth of the power and ascendancy of the judiciary in India and the awesome power it has acquired over the decades is a fascinating story. Endowed with the power of Judicial Review and using the tool of Public Interest Litigation (PIL) the judiciary has reached today a position of unquestionable strength and power over the other organs.

Beginning with only the power to declare void even constitutional amendments carried out by a people's Parliament, the judiciary went on to extend the scope of power it could wield by forging concepts of which the "basic features" is the most dominant. Though there is no unanimous agreement as to what these are, Judicial Review is considered one and with the power so conferred upon it the Court system, the Judges have played an edifying part in transforming the role which the judiciary plays going far beyond the limits of being mere adjudicators of law. The range of such power wielded by the Superior

See Page 4

# TAXING LOGIC AND 80th AMENDMENT

S. R. Gautham, Advocate

from the last issue

1) There must be a contract to sell and to purchase.

2) There must be a seller and a buyer.

3) There must be a transfer of property in the goods.

Sales tax is leviable on the sale of goods under both the State and Central Acts only when all three incidents of sale as seen above exist.

Under Art. 286 of the Constitution of India, it is mandated that:

No law of a state shall impose or authorise the imposition of tax on the sale or purchase of goods where such sale or purchase takes place.

(a) outside the state; or

(b) in the course of import of goods into or export of the goods out of the territory of India.

By virtue of the 6th amendment to the Constitution w.e.f. 11-6-1956, only the Central Government was empowered to levy tax on the sale or purchase of goods other than news papers, where such sale or purchase takes place in the course of inter-state trade or commerce. Under S.3 of the CST Act, a sale or purchase of goods shall be deemed to take place in the course of inter-state trade or commerce if the sale or purchase:

(a) occasions the movement of goods from one state to another; or

(b) is effected by a transfer of documents of title to the goods during their movement.

What is important to notice is that the inter-state movement of goods must have been occasioned by 'sale' or 'purchase'. And on such sale or purchase occasioning inter-state movement of goods Central Sales Tax is levied u/s 8 of the CST Act.

In otherwords no tax can be levied on every inter-state movement of goods unless such movement has been occasioned by 'sale' or 'purchase'. Very often goods are moved by a manufacturer/ dealer from one state to his own branch in another state for the purpose of stock and sale, in such other state. Not even by a cruel stretch of imagination it can be said that the dealer has sold the goods to himself (!) occasioning such interstate movement of goods. Such interstate movement is not exigible to levy of Central Sales Tax as the sales tax laws stand to-day, the reason being the 'movement' has not been occasioned by 'sale' or 'purchase' as contemplated u/s 3 of the CST Act. All the same a dealer who transfers goods from one state to another is required to obtain a declaration in Form 'F' from the transferee branch evidencing the stock transfer. Such forms are required to be filed by the transferor branch along with its annual returns and the value of goods/ stock transferred is deducted from its total turnover. The transferee branch in the other state collects local sales tax on its sale within that state.

Such interstate movement of goods is an essential and necessary concomitant of interstate commerce.

It may not be out of place here to refer to levy of sales tax on electrical energy, once again under the fictional assumption, that energy is goods and that property in such goods can be transferred. But there is a difficulty here. If the energy is produced and delivered within the state, local sales tax is applicable. But in these days when the state is connected to the national grid, what is the tax and what is the rate of tax leviable on the supply of energy from across the border of the state?

The concept of federalism is unity in diversity. Though for reasons of administation every state is a separate entity, all federating states are an integral part of the Union and nothing shall be done which has the effect of eroding in the slightest degree this oneness and togetherness of the nation. There already exists various interstate disputes such as sharing of river water, border disputes, linguistic disputes which require to be resolved amicably and expeditiously to foster, strengthen and sustain the sense of brotherhood amongst all people living in the federating units.

It is in this context, the Constitution 80th Amendment Bill providing for levy of Central Sales Tax on interstate movement of goods occasioned other than by way of sales or purchase, will have to be critically viewed.

The Constitution (80th Amendment Act) 2000 was passed on 9th June 2000. It provide as follows:

In Art. 269 of the Constitution, for Clauses 1 & 2 the following clauses shall be substituted, namely:

(1) Taxes on the sale or purchase of goods and taxes on the consignment of goods shall be levied and collected by the Government of India, but shall be assigned and shall be deemed to have been assigned to the States on or after 1-4-1996 in the manner provided in Clause (2)

to be continued.....

# TRANSFER OF DISTRICT JUDGES

*The High Court of Karnataka has ordered for transfer of 44 Judicial Officers in the Cadre of District Judges. These transfers will take effect from May 28, 2001.*

Mr. N. Ananda, Prl. District and Sessions Judge, Chitradurga; Mr. K. N. Keshavanarayana, Prl. Judge of Small Causes Court, Bangalore; Mr. K. Govindarajulu, District and Sessions Judge, Kodagu; Ms. B. S. Indrakala, Prl. District and Sessions Judge, Dakshina Kannada; Mr. Prakash Ballari, I Addl. Judge, Family Court, Bangalore; Mr. Basavantha Raya Patil, Prl. District and Sessions Judge, Bijapur; Mr. Arun Chowdapurakar, District and Sessions Judge, Raichur; Mr. V. V. Angadi, I Addl. District and Sessions Judge, Belgaum; Ms. Ratnakala, Addl. District and Sessions Judge, Shimoga; Mr. Shekara Gowd Patil, XIX Addl. City Civil and Sessions Judge, Bangalore; Mr. A. H. Adappanavar, XIII Addl. City Civil and Sessions Judge Bangalore; Mr. K. H. Malleshappa, I Addl. District and Sessions Judge, Dharwad; Mr. Sankanagowda V. Patil, Judge of Family Court, Mysore; Mr. S. D. Parmaj, President, Industrial Tribunal, Mysore; Mr. K. M. Thammaiah, Addl. District and Sessions Judge,, Mandya; Mr. K. G. Lakshmipathi, II Addl. Judge, Family Court, Bangalore; Mr. Divaker Rao, III Addl. City Civil and Sessions Judge, Bangalore; Mr. M. S. Evani, Addl. District and Sessions Judge, Chitradurga; Mr. N. S. Patil, II Addl. District and Sessions Judge, Raichur; Mr. Jayaswamy Nadiga, President, Industrial Tribunal, Hubli, Mr. J. C. Neeralagi, I Addl. District and Sessions Judge, Kolar ; Mr. M. G. Hiremath, Judge, Family Court, Raichur; Mr. S. N. Navalagund, IV Addl. District and Sessions Judge, Bijapur; Mr. P. G. Nadagowda, President, II Addl. Labour Court, Bangalore; Mr. H. M. Bhajanthri, II Addl. District and Sessions Judge, Kolar; Mr. H. S. Ramanna, Addl. Secretary, Law Department; Mr. A. M. Bennur, District Judge, Leave reserve; Mr. Arun R. Joshi, II Addl. Judge, Belgaum; Mr. M. S. Balakrishna, II Addl. District Judge, Dakshina Kannada; Mr. Narendra Kumar Gunaki, XXIV Addl. City Civil & Sessions Judge, Bangalore; Mr. P. Krishna Bhat, I Addl. District and Sessions Judge, Bangalore Rural; Mr. K. Somashekar, XII Addl. City Civil and Sessions Judge, Bangalore; Ms. K. S. Mudagal, XVIII Addl. City Civil and Sessions Judge, Bangalore; Mr. N. Subba Rao, Judge, Family Court, Bijapur; Mr. S. S. Nagarale, III Addl. District and Sessions Judge, Belgaum; Mr. K. M. Parvathi, Member, Karnataka Appellate Tribunal, Bangalore; Mr. B. Yoginath, IV Addl. City Civil and Sessions Judge, Bangalore; Mr. Sudhakar A Pandit, III Addl. District and Sessions Judge, Dakshina Kannada, Mr. A. S. Patil, President, Addl. Labour Court, Hubli, Mr. N. H. Savalagi, Addl. District and Sessions Judge, Raichur; Mr. S. G. Pallad, Member, Karnataka Administrative Tribunal, Bangalore; Mr. J. V. Angadi Hiremath, II Addl. District and Sessions Judge, Dharwad; Mr. T. H. Narayana Gowda, President, Labour Court, Bijapur; Mr. K. C. Ramakrishnaiah, Registrar, Karnataka Administrative Tribunal, Bangalore; Mr. Jayathirtha N. Havanur, Promoted and posted as VIII Addl. City Civil and Sessions Judge, Bangalore.

# WEDDINGS

We are glad to inform that

* On 3-5-2001, Mr. S. Shivakumar, Advocate, married Ms. S. Smeetha at Bangalore.
* On 4-5-2001, Mr. V. Parmeshwer, Advocate, married Ms. M. Ratnakamala at Bangalore.
* On 4-5-2001, Ms. Veena, an Advocate from Bangalore married Mr. Madaiah (Ravindra) at Virajpet.
* On 9-5-2001, Mr. S. A. Maruthi Prasad, Advocate, married Ms. C. Asha at Bangalore.
* On 17-5-2001, Mr. N. Vageesha, Advocate married Ms. Veena at Bangalore.

## READERS WRITE

*Sir,*

This letter is written to be published in Communique and not to be thrown into dust bin. Thank God, Communique is for private circulation among the legal fraternity. A duty is cast upon the Advocates (both female and male) to maintain the dignity of the profession.

We do not want to beat around the bush. The issue of your Communique released for April 2001 has a column 'Humour in Courts', pertaining to a junior lady advocate. It cannot be considered to be a joke. Moreover, it only reflects the cheap taste of the Author of the joke. Any joke has to be healthy but not filthy. Lady advocates are immensely hurt by the filthy imagination of the author. We, therefore, request that an apology be published either by the author or on behalf of the author. We hope that hereafter such unhealthy jokes which reflect dirty tastes are censored by the Editor.

Pained lady advocates

*One hundred and fifty six lady lawyers of Bangalore have signed this letter which is self explanatory. The referred Humour item was published not with an intension of hurting the feeling of lady members of the fraternity. Care would be taken to avoid recurrence of publication of sensitive items.*

*- Editor*

## MISCELLANY

On 28-5-2001 Mr. T. V. Tajpeer, Advocate, opened his new law chamber at I floor, Hameed Shah Complex, Behind Ulsoorgate Police Station, Cubbonpet Main Road, Bangalore-560 002 Ph : (R) 5295245

## OBITUARY

We regret to inform that

◆ On 18-5-2001, S. B. Hanumantha Reddy (53), Advocate passed away at Bangalore.

◆ On 26-5-2001, Mr. Muthappa (30), an Advocate from Bangalore passed away at Mysore.

## JUDICIAL ACTIVISM - USE AND ABUSE

**continued from Page 2**

Courts in India is of a sweep unknown to other countries. Thus, Judicial Activism confers upon the judiciary enormous powers to prevail over executive and legislature.

Has this enormous assumption of power been beneficial to the Courts and the people?

This takes up to the many ways in which this judicial power is exercised. The sweep and range of this power of the judiciary can be seen in many of the orders and directions given, notably by the Supreme Court and also the High Courts.

Directions to release undertrials who had spent more time in prison than if they would if sentenced for the offence.

Guidelines relating to running of Blood Banks.

Guidelines relating to running of buses.

Guidelines in regard to functioning of CBI and reporting to the Supreme Court and not to the executive superiors.

Directions for preserving children's and women's Homes.

Improvement of conditions in Jails, Remand Homes, Mental Homes.

Improvement of conditions in Railways.

Implementation of Labour Laws for construction workers.

Setting standards for admissions to medical education, fixing agency for such recruitment.

Reliefs for pavement and slum dwellers.

Directing Municipalities to construct drainage system, clear garbage etc.

Directions for closing industries, starting industries.

Even religious matters in regard to construction of a temple.

Judgement on corrupt ministers and men in public life.

Disinvestment matters.

Directions for prevention of sexual harassment of women working in public places.

And many other matters too numerous to mention.

What are the factors which led to a situation where the judiciary is engaged in a manner of speaking in the governance of the country?

Over the decades after independence, the political parties and the bureaucracy have reached such levels of corruption and inaction that they have, to a large extent, abdicated their respective responsibilities. When the Legislature does not legislate in a responsive manner and the executive fails in effective implementation of the law and the performance of its duties, the judiciary could not sit passive and had to step into the vacuum. As the guardians of the people's liberties, they felt the compulsion to play a creative role in socialite matters and make their own contribution to the fulfilment of the preambular promise under the Constitution. When the legislature who had been the repository of powers under the Constitution as the protector of the people's rights and liberties, failed, the judiciary was forced to keep its check on errant politicians and Governments.

When the very foundation of the Constitution was laid on the basis that the states would measure up to the constitutional responsibilities and the executive branch would function in a manner accountable to the legislature and these pillars of support gave way, the judiciary felt it its plain duty to deal with the situation and prod into action the organs that had failed.

Thus, Judicial Activism is not a role which the Courts assumed with elan or with a view to tilt at the administration but to maintain the constitutional values in a society in discharge of what is perceived to be a duty plainly laid upon it by the Constitution. (to use the words of Patanjali Shashtri, CJI)

In extending this power of Judicial Activism, the Court was assisted by two developments for the strengthening of which the Courts themselves were responsible :

a) dilution to the point of extinction of the locus standi principle and opening the doors wide for any litigant to approach the Court system, even without a properly drafted petition and complying with any procedural requirements (even the sending of a post card could start action).

b) Examining any oppressive action solely for the point of reasonableness.

**to be continued.....**

## Congratulations

Communique congratulates Mr. J. G. Chandramohan, Advocate, who has been elected as the president of Lions Club of Bangalore South; Mr. P. R. Ramesh, Advocate, who has been elected as the president of Lions Club of Sarakki; Ms. Prabha Murthy, Advocate, who has been elected as the president of Lions Club of Jayanagar and Master Manish C. Hiremath son of Mr. C. S. Hiremath, Advocate, student of National High School, Basavanagudi, who has secured distinction in the recently held Public Examination for 10th Standard by obtaining 576 marks out of 625.



**Mr. J. G. Chandramohan**



**Mr. P. R. Ramesh**



**Ms. Prabha Murthy**



**Master Manish C. Hiremath**

Published by : **Lahari Advocates Forum,** No. 2980, "Laxmideep", 17th Cross, K. R. Road, BSK II Stage, Bangalore-560 070
Printed at : **The Printing House**, Chamarajpet, Bangalore-560 018 Phone : 6527770 Editor : **K. Suryanarayana Rao**

ಲಹರಿ ಸಂವಾದ

ಸಂಪುಟ ೨ | ಶಕೆ: ವಿಷುನಾಮ ಸಂವತ್ಸರ ಮಾಸ: ಜ್ಯೇಷ್ಠ - ಆಷಾಢ | ಸಂಚಿಕೆ ೨

# ಗಣಿತ ಶಾಸ್ತ್ರ ಒಂದು ಪುನರ್ ಮನನ

- (ಹಾ. ರಾ.)

ವಯಸ್ಸಾಗುತ್ತ ಬಂದಂತೆಲ್ಲ ನನಗೆ ಗಣಿತಶಾಸ್ತ್ರ ತಿರುಗು ಮುರಗಾದಂತೆ ಭಾಸವಾಗುತ್ತಿದೆ. ಹಿಂದಿನ ಕಾಲದಲ್ಲಿ ಗಣಿತ ಶಾಸ್ತ್ರದ ಕೆಲವು ಮೂಲ ನಿಯಮಗಳನ್ನು, ಸೂತ್ರಗಳನ್ನೂ ಜನರು ಸಂಪೂರ್ಣವಾಗಿ ನಂಬಿದ್ದರು. ಅದರ ಆಧಾರದ ಮೇಲೆ (Trust) ಜನಗಳು ದೈನಂದಿನ ವ್ಯವಹಾರಗಳನ್ನು ನಡೆಸುತ್ತಿದ್ದುದರಿಂದ ಬದುಕಿಗೂ, ಗಣಿತ ಶಾಸ್ತ್ರಕ್ಕೂ ನಿಕಟ ಸಂಬಂಧವಿತ್ತು. ಜನಗಳು ಲೆಕ್ಕಾಚಾರವನ್ನು ಪರಸ್ಪರ ಒಪ್ಪಿಕೊಳ್ಳುತ್ತಿದ್ದುದರಿಂದ ಲೆಕ್ಕಾಚಾರದ ಜನರೆಂಬ ಕೀರ್ತಿಯನ್ನು ಪಡೆದಿದ್ದರು. ಈಗ ನೋಡಿದರೆ ನಮ್ಮ ಲೆಕ್ಕಾಚಾರವೆಲ್ಲ ತಲೆಕೆಳಗಾದಂತೆ ತೋರುತ್ತಿದೆ. ಗಣಿತಶಾಸ್ತ್ರ ಮೂಲ ಸೂತ್ರಗಳೂ ರಾಜಕೀಯ ತತ್ವಗಳಂತೆ ವಿಶ್ವಾಸವನ್ನು ಕಳೆದುಕೊಳ್ಳುತ್ತಿದೆ. ಒಬ್ಬರ ಲೆಕ್ಕ ಇನ್ನೊಬ್ಬರು ಒಪ್ಪುವುದಿಲ್ಲ. ಒಬ್ಬೊಬ್ಬರು ಒಂದೊಂದು ರೀತಿ ಉತ್ತರ ಕೊಡುತ್ತಾರೆ. ಮೂಲಭೂತವಾಗಿ ತಮ್ಮನ್ನು ತಾವೇ ವಂಚಿಸಿ ಕೊಳ್ಳುವಂತಾಗುತ್ತಿದೆ. ಅವರವರ ಆಯವ್ಯಯದ ಲೆಕ್ಕಗಳನ್ನು ತಾವೇ ಪರಿಶೀಲಿಸಿಕೊಂಡಾಗ! ನನಗೆ ಈ ತತ್ವದ ರಹಸ್ಯ ಗೊತ್ತಾಗಿದ್ದು ಶ್ರೀನಿವಾಸರಾಯರ ಅಕೌಂಟ್ ಬುಕ್ಕುಗಳನ್ನು ಆಡಿಟ್ ಮಾಡುತ್ತಿದ್ದಾಗ! ತಮ್ಮ ಮಗನ ಮೆಡಿಕಲ್ ಸೀಟಿಗೆ, ವಿದ್ಯಾಭ್ಯಾಸದ ಖರ್ಚಿಗೆ 10 ಲಕ್ಷ ರೂ ಖರ್ಚು ಮಾಡಿದ್ದು ನನಗೆ ಖುದ್ದು ಗೊತ್ತಿದ್ದರೂ ಅವರು ಲೆಕ್ಕದ ಪುಸ್ತಕದ ಪ್ರಕಾರ ಖರ್ಚು ಮಾಡಿರುವುದು ಒಂದೇ ಒಂದು ಲಕ್ಷ. ಹೊಸ ಬಡಾವಣೆಯಲ್ಲಿ ಅವರು ಕಟ್ಟಿರುವ ಗ್ರಾನೈಟ್ ಬಂಗಲೆಗೆ 25 ಲಕ್ಷ ಖರ್ಚು ಮಾಡಿದ್ದರೂ ಅವರ ಲೆಕ್ಕದ ಪುಸ್ತಕದಲ್ಲಿ ಕಂಡಿರುವುದು ಕೇವಲ 5 ಲಕ್ಷ! ತತ್ವಜ್ಞಾನಿ ಶಿಷುನಾಳ ಷರೀಫರ ತತ್ವಪದ ಜ್ಞಾಪಕಕ್ಕೆ ಬರುತ್ತಲ್ಲವೆ? ನಮ್ಮ ಸುತ್ತಲಿನ ಸಾಮಾಜಿಕ, ರಾಜಕೀಯ, ನೈತಿಕ ತತ್ವಗಳಿಂದ ಹೆಪ್ಪುಗಟ್ಟಿಕೊಂಡಿರುವ ಪರಿಸರದ ಪ್ರಭಾವ ಜನರ ಮೇಲೆ ಎಷ್ಟು ಆಗಿದೆಯೆಂದರೆ, ಗಣಿತಶಾಸ್ತ್ರ ಕೇವಲ ಕಾಲ್ಪನಿಕ ಊಹಾಪೋಹಗಳ ಕಂತೆ ಎಂದು ಹೇಳುವ ಘಟ್ಟಕ್ಕೆ ಜನರು ತಲುಪಿದ್ದಾರೆ. ಇದಕ್ಕೆ ಕಾರಣವೇನಿರಬಹುದು? ನಾನೊಂದು ಫೈನಾನ್ಸ್ ಕಂಪನಿಯಲ್ಲಿ ಹಿಂದೆ ಕೆಲಸ ಮಾಡುತ್ತಿದ್ದೆ. ಅದರ ಲೆಕ್ಕಪತ್ರಗಳೆಲ್ಲ ತಪ್ಪು ಎಂದು ಕೋರ್ಟು ಸಾರಿದ ಮೇಲೆ ನಾನು ಕೆಲಸಕ್ಕೆ ರಾಜಿನಾಮೆ ಕೊಟ್ಟು ಆಧುನಿಕ ಗಣಿತಶಾಸ್ತ್ರದಲ್ಲಿ ಗಾಢವಾದ ಅಧ್ಯಯನ ನಡೆಸಿ ಸಿ.ಬಿ. ಐನವರು ಮಾಹಿತಿಯನ್ನು ಸಂಗ್ರಹಿಸುವ ರೀತಿಯಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಿದೆ. ಗಣಿತಶಾಸ್ತ್ರದ ಮೂಲಸೂತ್ರಗಳಿಂದ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರಗಳು ತಮ್ಮ ಹಿಂದಿನ ಸ್ಪಷ್ಟತೆಯನ್ನೂ, ನಿಕರತೆಯನ್ನೂ (Preciseness) ಈಗ ಕಳೆದು ಕೊಂಡಿರುವುದೇ ಇದಕ್ಕೆ ಬಹುಮುಖ್ಯವಾದ ಕಾರಣವೆಂದು ನನಗೆ ತಿಳಿಯಿತು. ಹಲವಾರು ರಾಜಕಾರಣಿಗಳನ್ನೂ, ಕಲಾವಿದರನ್ನೂ, ಸಿನಿಮಾ ತಾರೆಯರನ್ನೂ ಸಂದರ್ಶಿಸಿ ಅವರ ಅಮೂಲ್ಯವಾದ ಅಭಿಪ್ರಾಯಗಳನ್ನು ಸಂಪಾದಿಸಿದೆ. ಅವರಲ್ಲಿ ಪ್ರತಿಯೊಬ್ಬರೂ ''ನನಗೇನು ಮಹಾ ವಯಸ್ಸಾಗಿದೆ. ಭೂಗ್ರಹಕ್ಕೆ ಆಗಿರುವ ವಯಸ್ಸನ್ನು ಲೆಕ್ಕಾಚಾರ ಹಾಕಿಕೊಂಡು ನೋಡಿದರೆ'' ಎಂದು ನನ್ನಂತೆಯೇ ರಾಗ ಎಳೆದರು. ವಯಸ್ಸು ವರ್ಷ ವರ್ಷಕ್ಕೆ ಪ್ಲಸ್ ಆಗುತ್ತ ಏರುತ್ತಿದೆ ಎಂಬ ಅರಿವು ಯಾರಿಗೂ ಇದ್ದಂತೆ ಕಾಣಿಸಲಿಲ್ಲ. ಕ್ಯಾಲೆಂಡರ್‌ಗಳನ್ನು, ಪಂಚಾಂಗವನ್ನು ಬಿಚ್ಚಿ, ಯಾರಾದರೂ ವರ್ಷದ ಹೆಸರು, ದಿನ, ನಕ್ಷತ್ರ ಹೇಳಿದರೆ ಅದು ಸರಿ ಎಂದು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ! ಪಂಚಾಂಗವನ್ನು ಹರಿದು ನಕ್ಷತ್ರವೂ ಹೋಯಿತು ಎಂದು ಬಿಟ್ಟರು! ಅಂದಹಾಗೆ ಎಪ್ಪತ್ತಾದರೂ ಇನ್ನೂ ಇಪ್ಪತ್ತರ ಬೂಟಾಟಿಕೆ ಏಕೆ? 'We do not count a man's years until he has nothing else to count' ಎಂದು ಹೇಳಿದ ಎಮರ್ಸನ್ ಮಾತು ಜ್ಞಾಪಕಕ್ಕೆ ಬಂತು. ಹೋಗಲಿ ನಮ್ಮೂರು ಸಿನಿಮಾ ತಾರೆಯನ್ನು ಯಾರೇ ಸಂದರ್ಶಿಸಿದರೂ ತನ್ನ ವಯಸ್ಸು ಹದಿನೆಂಟು ಎಂದೇ ಸಾಧಿಸುತ್ತಾಳಲ್ಲ ಏಕೆ? 'When a women has a birthday, she always takes a year off' ಎಂದು ಹೇಳಿದವನು ಬರ್ನಾಡ್‌ಷಾ. ಈ ಮಾತುಗಳು ಗಣಿತಶಾಸ್ತ್ರದ ಮೇಲೆ ಪ್ರಬಾವ ಬೀರಿದೆ ಎಂದೆನಿಸುವುದಿಲ್ಲವೆ?

ನನ್ನ ಗಂಭೀರವಾದ ವಿಚಾರಧಾರೆಯನ್ನು ಇದು ಸಮರ್ಥಿಸುತ್ತದೆ. ವಾಸ್ತವವಾಗಿ ಸಂಕಲನವೆಂಬ ಗಣಿತಶಾಸ್ತ್ರದ ಸೂತ್ರವು ಕಾಲಗರ್ಭದಲ್ಲಿ ವ್ಯವಕಲನವಾಗಿಬಿಟ್ಟಿದೆ! ಗೆಲಿಲಿಯೋ ಎಂಬ ಪ್ರಖ್ಯಾತ ಖಗೋಳ ವಿಜ್ಞಾನಿ ಸೌರವ್ಯೂಹದ ಗುಟ್ಟನ್ನು ಗುರುತ್ವಾಕರ್ಷಣೆಯ ಒಂದು ಸಮೀಕರಣದಿಂದ ಬಯಲು ಮಾಡಿದಾಗ ಏನಾಯಿತು? ಅದುವರೆಗೆ ಅರಿತಿದ್ದ ಜಗತ್ತಿನ ಸೃಷ್ಟಿ ನಿಯಮವೇ ಮುರಿದು ಬಿತ್ತು? ಸೂರ್ಯ ಗ್ರಹ ಸುತ್ತುತ್ತಿಲ್ಲ. ಭೂಮಿ ತನ್ನ ಅಕ್ಷದ ಸುತ್ತ ತಿರುಗುತ್ತಿದೆ ಎಂಬ ಸತ್ಯ ಹೊರಬಿತ್ತು. ಈಗ ಗಣಿತಶಾಸ್ತ್ರದಲ್ಲಿ ಸಂಕಲನದ ಗತಿಯೂ ಅಷ್ಟೆ! ನಿಮ್ಮ ವಯಸ್ಸೆಷ್ಟು? ಎಂದು ಕೇಳಿದ ಒಂದು ಸಣ್ಣ ಪ್ರಶ್ನೆಗೆ ಕಾಲ ದೇಶ ವರ್ತಮಾನಗಳು ವ್ಯಾಖ್ಯಾನಕ್ಕೆ ಎಡೆಮಾಡಿಕೊಡುತ್ತೆಂಬ ಸತ್ಯವು ಬಹಿರಂಗವಾದ ಮೇಲೆ (Candid truth) ಸಂಕಲನ ತನ್ನ ಸ್ಥಿರತೆ, ನಿಶ್ಚಲತೆ ಹಾಗೂ ಅಚಲತೆಯ ಗುಣಗಳನ್ನು ಕಳೆದುಕೊಂಡುಬಿಟ್ಟಿದೆ ಎಂದು ಹೇಳದೆ ವಿಧಿಯಿಲ್ಲ! ಅದು ಮೊದಲಿನ ಹಾಗೆ 'ರಿಜಿಡ್' ಅಥವ 'ಫಿಕ್ಸೆಡ್' ಅಲ್ಲ. ಪ್ರಜಾಪ್ರಭುತ್ವ ರಾಷ್ಟ್ರಗಳ ರಾಜ್ಯಾಂಗಗಳ ಹಾಗೆ, ಗಣಿತಶಾಸ್ತ್ರದ ಸೂತ್ರಗಳಿಂದ ನಮಗೆ ದಕ್ಕುವ ಫಲಿತಾಂಶಗಳೂ ಈಗ 'Flexible' ಎಂದೆನಿಸುತ್ತದೆ! ನಾನು ಈ ಊರಿಗೆ ಬಂದಾಗ ನಮ್ಮ ಮನೆಯ ಹತ್ತಿರವಿರುವ ದಿಬ್ಬದ ದಾರಿಯನ್ನು ಹತ್ತಿ ತುದಿಯಲ್ಲಿರುವ ಕೋರ್ಟಿಗೆ ಹೋಗುವುದಕ್ಕೆ ಹತ್ತು ನಿಮಿಷ ತೆಗೆದುಕೊಳ್ಳುತ್ತಿದ್ದೆ. ಈಗ ಕನಿಷ್ಟವೆಂದರೆ 25 ನಿಮಿಷಗಳಾಗುತ್ತವೆ. ಕಾರಣ ರಸ್ತೆಯ ಉದ್ದ ಜಾಸ್ತಿಯಾಗಿ ದಿಬ್ಬವೂ ಎತ್ತರ ಬೆಳೆದು ಬಿಟ್ಟಿದೆ! ಮೈಲಿಗಲ್ಲುಗಳನ್ನು ನಂಬಿಕೊಂಡರೆ ಯಾತ್ರೆ ಕೆಟ್ಟಂತೆಯೆ! ನನಗೆ ಗಣಿತಶಾಸ್ತ್ರದ ಅಸತ್ಯದ ಸುಳುವು ಬೆಳಿಗ್ಗೆ ಎದ್ದು ಗಡಿಯಾರ ನೋಡಿದಾಗಲೇ ಸಿಗುತ್ತದೆ. ಅಂತರಿಕ್ಷದಲ್ಲಿ ಸೂರ್ಯನು ಎಲ್ಲೋ ಕಾಣಿಸಿಕೊಳ್ಳುತ್ತಾನೆ. ಋತು ಚಕ್ರದಲ್ಲೇ ಏರುಪೇರು. ಒಂದು ಕ್ಷಣ ಇದ್ದ ಹಾಗೆ ಇನ್ನೊಂದು ಕ್ಷಣ ಇರುವುದಿಲ್ಲ. ಬಿಸಿಲು-ಮಳೆ-ಮಂಜು-ಚಳಿ ಮರುಕ್ಷಣದಲ್ಲೇ ಸೆಕೆ! ನಾವು ಕಂಡ ಹಾಗೇ ಹತ್ತಾರು ವರ್ಷಗಳ ಹಿಂದೆ ಹೀಗೆಲ್ಲಿ ಆಗುತ್ತಿತ್ತು? ಇಷ್ಟೆಲ್ಲ ಬದಲಾವಣೆಗಳು ಪ್ರಕೃತಿಯ ಚಲನವಲನಗಳಲ್ಲಾಗಿವೆ ಎಂದ ಮೇಲೆ ಗಣಿತಶಾಸ್ತ್ರವೂ ರಾಜ್ಯಶಾಸ್ತ್ರದಂತೆ ತನ್ನ ಮೌಲ್ಯವನ್ನೂ, ವರ್ಚಸ್ಸನ್ನೂ ಈಗಾಗಲೇ ಕಳೆದುಕೊಂಡಿದೆ ಎಂದೆನಿಸುವುದಿಲ್ಲವೆ? ರಾಜ್ಯಶಾಸ್ತ್ರದಲ್ಲಿ ಹೊಸದಾಗಿ ವೈಭವೀಕರಿಸಿದ 'Value based politics' ಎಂಬ ಒಂದು ಗಹನವಾದ ಅತ್ಯಾಧುನಿಕ ಸೂತ್ರವು ಗಣಿತಶಾಸ್ತ್ರದ ಬೇರನ್ನೇ ಅಲ್ಲಾಡಿಸಿಬಿಟ್ಟಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು! Base, debase ಆದರೆ 'ವೇಲ್ಯು' - ಮೈನಸ್ ಆಗಬೇಕಷ್ಟೆ. ಆದರೆ ಹಾಗೆಲ್ಲಾಗಿದೆ? ಸಂಕಲನದ ಚಿಹ್ನೆಯನ್ನು ಉಪಯೋಗಿಸಿರುವ ಈ ಸೂತ್ರವನ್ನು ಪರಿಶೀಲಿಸಿ. ಸೋತವನು + ಸೋತವನು + ಸೋತವನು = (is equal to) ಗೆದ್ದವನು. ರಾಜಕೀಯದಲ್ಲಿ ಮೈನಸ್ ಆದವರು ಕೂಡಿಕೊಂಡರೆ ಪ್ಲಸ್ ಆಗುವ ಸೂತ್ರ ಆಧುನಿಕ ಗಣಿತಶಾಸ್ತ್ರಕ್ಕೆ ದಕ್ಕಿರುವ ಒಂದು ಮಹಾನ್ ಕೊಡುಗೆ! ಉದಾಹರಣೆಗೆ United front, N.D.A ಇತ್ಯಾದಿ!

ನಾನು ಹುಡುಗನಾಗಿದ್ದಾಗ ಶಾಲೆಯಲ್ಲಿ One plus one ಎಂದರೆ ಎಂಥ ದಡ್ಡನೂ ಒಂದೇ ಉತ್ತರ ಕೊಡುತ್ತಿದ್ದ. ಈಗ ಹಾಗಲ್ಲ. ಬಾಲಕರಲ್ಲೇ ಭಿನ್ನಾಭಿಪ್ರಾಯ! ಒಬ್ಬೊಬ್ಬರ ಲೆಕ್ಕಕ್ಕೂ ಬೇರೆ ಬೇರೆ ಉತ್ತರ.

***(ಮುಂದುವರೆಯುವುದು)***

## ........ ಇಲ್ಲದೇ, ಕಾಣದೇ

''ಕಟ್ಟುತಿಹರು ಬಹುಮಹಡಿ ಕಟ್ಟಡಗಳ
ಭೂಕಂಪನ ಭಯವಿಲ್ಲದೆ
ಕೊಳ್ಳುತ್ತಿರುವರು ಹೊಸ ಹೊಸ ಕಾರು ಮೋಟಾರುಗಳ
ವಾಯು ಮಾಲಿನ್ಯದ ಭಯವಿಲ್ಲದೆ
ಹುಟ್ಟಿತಿರುವರು ದಿನವೂ ಸಾವಿರ ಸಾವಿರ
ಸಾವಿನ ಭಯವಿಲ್ಲದೆ
ಬದುಕುತ್ತಿರುವರು ಜನ
ದಿನನಿತ್ಯ; ನೆಮ್ಮದಿಯ ಕಾಣದೆ.''

**ಕ.ವೆಂ.ರಾ.**

## ಹನಿಗವನ

### ಗಾಂಧೀಜಿ

ಮೋಹನದಾಸ ಕರಮಚಂದ ಗಾಂಧಿ
ನಿಜವಾಗ್ಲೂ ಮಹಾತ್ಮ
ಭಾರತಕೆ ಆಂಗ್ಲರಿಂದ ಸ್ವಾತಂತ್ರ್ಯ
ತಂದುಕೊಟ್ಟ ಪುಣ್ಯಾತ್ಮ
ಭಾರತೀಯರಿಗಾದ ಅಚ್ಚುಮೆಚ್ಚಿನ
ಪರಮಾತ್ಮ
ನಂತರ ಗೋಡ್ಸೆ ಗುಂಡೇಟಿಗೆ ಬಲಿಯಾಗಿ
ಆದ ಹುತಾತ್ಮ

### ವಿದ್ಯೆ

ವಿದ್ಯೆಯೆಂಬುದು ಸಿಹಿ ತುಂಬಿದ ಹಣ್ಣು
ಓದಲು ಬರೆಯಲು ಚೆನ್ನಾಗಿರಬೇಕು
ಕಣ್ಣು
ವಿದ್ಯೆಯ ಅರ್ಥಕೆ ಬಿಟ್ಟವ ಮುಕ್ಕುವನು
ಮಣ್ಣು
ವಿದ್ಯೆ ಕಲಿತವನನ್ನು ವರಿಸುವಳು ಉತ್ತಮ
ಹೆಣ್ಣು

### ಆತ್ಮ

ಯಾರಿಗೂ ಗೋಚರವಾಗದ ಆಂತರಿಕ
ಶಕ್ತಿ ಆತ್ಮ
ಅದರೊಳಗಿರುವನು ಶಕ್ತಿ ಸ್ವರೂಪಿ
ಪರಮಾತ್ಮ
ಪರಮಾತ್ಮನ ಕಂಡವನೇ ಪುಣ್ಯಾತ್ಮ

**ಕೆ. ಎನ್. ಮೈಲಾರ ಪ್ರಸಾದ್,**
ವಕೀಲರು

## ಉದ್ಘಾಟನಾ ಸಮಾರಂಭ

ತಾ|| 28-05-2001ರಂದು ಮಧ್ಯಾಹ್ನ ಸುಮಾರು ಎರಡು ಗಂಟೆ ವೇಳೆಯಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯ ಮೂರ್ತಿಗಳಾದ ಶ್ರೀ ಪಿ. ವಿ. ರೆಡ್ಡಿಯವರು ತಮ್ಮ ಅಮೃತ ಹಸ್ತದಿಂದ ಬೆಂಗಳೂರು ವಕೀಲರ ಸಂಘದ ಉಚ್ಛ ನ್ಯಾಯಾಲಯ ಘಟಕದ ವಕೀಲರ ನೂತನ ವಿಶ್ರಾಂತಿ ಪ್ರಾಂಗಣ ಕೊಠಡಿಯನ್ನು ಉದ್ಘಾಟಿಸಿದರು. ಸಭೆಗೆ ಹೈಕೋರ್ಟಿನ ಎಲ್ಲಾ ನ್ಯಾಯಾಧೀಶರು ಮತ್ತು ವಕೀಲ ಮಿತ್ರರು ಹಾಜರಿದ್ದರು. ಮುಖ್ಯ ಅತಿಥಿ ಗಳಾಗಿ ಆಂಧ್ರಪ್ರದೇಶ ಹೈಕೋರ್ಟಿನ ಹಿರಿಯ ನ್ಯಾಯಾಧೀಶರಾದ ಶ್ರೀ ಮೋತಿ ರಾಮ್‌ರವರು ಉಪಸ್ಥಿತರಿದ್ದರು. ಸಭೆ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಮಲ್ಲೇಶಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಕಾರ್ಯದರ್ಶಿಗಳಾದ ಶ್ರೀ ನಾಗ ಮೋಹನ್‌ದಾಸ್‌ರವರು ಅತಿಥಿ ಗಳನ್ನು ಸ್ವಾಗತಿಸಿ ಈ ಸಭೆಯಲ್ಲಿ ಭಾಗವಹಿಸಿ, ಸಭೆ ಯಶಸ್ವಿಗೊಳಿಸಿದ್ದಕ್ಕೆ ಮುಖ್ಯ ನ್ಯಾಯಾಧೀಶರಿಗೆ ಹಾಗೂ ಅತಿಥಿಗಳಿಗೆ ಸಭೆಯ ಅಧ್ಯಕ್ಷರಿಂದ ಬೃಹತ್ ಪುಷ್ಪಹಾರ ಪ್ರತ್ಯೇಕವಾಗಿ ಹಾಕುವುದರ ಮೂಲಕ ವಂದನೆಗಳನ್ನು ಸಲ್ಲಿಸಿದರು. ಸಭೆಯ ನಂತರ ಸಭಿಕರಿಗೆ ಮತ್ತು ಗಣ್ಯರಿಗೆ ಚಹಾಕೂಟ ಏರ್ಪಾಡಾಗಿತ್ತು.

**–ಎಸ್. ಗೋಪಾಲ್**, ವಕೀಲರು,
ಬೆಂಗಳೂರು

## ಕಾನೂನು ಪದಕೋಶ

| | |
|---|---|
| Security Bond | ಜಾಮೀನು ಮುಚ್ಚಳಿಕೆ |
| Sedition | ದೇಶದ್ರೋಹ |
| Seduce | ದುರ್ಮಾರ್ಗಕ್ಕೆ ಪ್ರೇರೇಪಿಸು |
| Sediction | ಶೀಲಭಂಗ ಪ್ರೇರಣೆ |
| Segregate | ಪ್ರತ್ಯೇಕಿಸು, ಬೇರ್ಪಡಿಸು |
| Seize | ಜಪ್ತಿಮಾಡು, ಹಿಡಿ |
| Self defence | ಆತ್ಮ ರಕ್ಷಣೆ |
| Self Inflicted Injury | ಸ್ವಯಂಕೃತ ಹಾನಿ |
| Semblance | ಹೋಲಿಕೆ |
| Seminar | ವಿಚಾರಗೋಷ್ಠಿ |
| Senility | ವಾರ್ಧಕ್ಯ, ಮುಪ್ಪು |
| Seniority | ಜ್ಯೇಷ್ಠತೆ |
| Sentence | ವಾಕ್ಯ, ದಂಡಾದೇಶ |
| Separate Maintanance | ಪ್ರತ್ಯೇಕ ಜೀವನಾಂಶ |
| Sequestered | ಪರಿತ್ಯಕ್ತ, ಏಕಾಂತ ವಾಸದಲ್ಲಿರುವ |
| Seriatim | ಕ್ರಮಬದ್ಧ, ಯಥಾ ಪ್ರಕಾರ |
| Settle | ತೀರ್ಮಾನಿಸು, ರಾಜಿ |
| Several | ಬೇರೆ ಬೇರೆ |
| Sham | ಮೋಸ, ಠಕ್ಕು |
| Shample | ಸುಳ್ಳು, ನೆವ |
| Share | ಷೇರು, ಅಂಶ, ಪಾಲು |
| Sharpen | ವಂಚಕ |
| Shock | ಆಘಾತ, ಧಕ್ಕೆ |
| Shortage | ಕೊರತೆ |
| Shortterm loan | ಅಲ್ಪಾವಧಿ ಸಾಲ |
| Shrew | ಜಗಳಗಂಟಿ, ಗಯ್ಯಾಳಿ |
| Sic | ಹೀಗೆ, ಇತಿ |

## ಆರೋಗ್ಯ ಸಂಬಂಧ ಗಾದೆಗಳು

1. ಅತಿಯಾದರೆ ಅಮೃತವೂ ವಿಷ.
2. ತುಸು ತಿಂದರೂ ಕಸ ತಿನ್ನ ಬಾರದು.
3. ಉಪವಾಸ ಕೊಲ್ಲದು, ಆದರೆ ಹೊಟ್ಟೆಬಾಕತನ ಕೊಲ್ಲುತ್ತದೆ. (ರಶಿಯನ್)
4. ನೂರು ವೈದ್ಯರನ್ನು ಹೊಂದುವುದಕ್ಕಿಂತ ರಾತ್ರಿಯೂಟ ಬಿಡುವುದು ಮೇಲು.
5. ಹೊಟ್ಟೆ ತುಂಬಿದ ಮೇಲೆ ಉಣ್ಣುವವನು. ತನ್ನ ಗೋರಿಯನ್ನು ತನ್ನ ಹಲ್ಲಿನಿಂದ ಅಗೆಯುತ್ತಾನೆ.
6. ಒಂದು ಈರುಳ್ಳಿ ಹತ್ತು ತಾಯಂದಿರಿದ್ದಂತೆ.
7. ತುಟಿ ಸುಮ್ಮನಿದ್ದರೂ ಹೊಟ್ಟೆ ಸುಮ್ಮನಿರದು.
8. ಬಾದಾಮಿ ತಿನ್ನುವವನು ಅದನ್ನು ಒಡೆಯಬೇಕು. (ಡೇನಿಶ್)
9. ಹಸಿದ ಹೊಟ್ಟೆಗೆ ಕಿವಿಗಳಿಲ್ಲ. (ಫ್ರೆಂಚ್)
10. ಹಸ್ತದ ಮೇಲಿನ ಗೆರೆಗಳನ್ನು ಎಂದಾದರೂ ಒರೆಸಲಾದೀತೆ? (ಹಿಂದಿ)
11. ಭುಜ ತಲೆಗಿಂತ ಮೇಲಿಲ್ಲ. (ಬಂಟು)
12. ಜಠರ ಕೋಶ ಹೋಟೆಲಿದ್ದಂತೆ. ಅಲ್ಲಿ ಬರುವುದು ಹೋಗುವುದು ನಡೆದಿರುತ್ತದೆ. (ಜರ್ಮನ್)
13. ಹುಡುಗ ಬೆಳೆಯುತ್ತಿರುವಾಗ ಆತನ ಹೊಟ್ಟೆಯಲ್ಲಿ ತೋಳ ಸೇರಿರುತ್ತದೆ.
14. ನಾಲಿಗೆಯ ತಪ್ಪು ಮನಸ್ಸಿನ ತಪ್ಪಲ್ಲ. (ಐರಿಶ್)
15. ಎಲ್ಲ ಮೂಗು ಕೆಳಕ್ಕೆ ನೋಡುತ್ತದೆ. (ಸೂಡಾನ್)
16. ಕುರುಡು ಕಣ್ಣು ತೆರೆದರೂ ಒಂದೇ, ಮುಚ್ಚಿದರೂ ಒಂದೇ.
17. ಕುರುಡನ ಕೈಯಲ್ಲಿ ಕನ್ನಡಿ ಕೊಟ್ಟ ಹಾಗೆ.
18. ಕುರುಡ ಕಂಡರಿಯ ಕಿವುಡ ಕೇಳರಿಯ.
19. ಕಣ್ಣುಗಳಿಗೆ ಎಲ್ಲ ಕಡೆ ಒಂದೇ ಭಾಷೆ.
20. ತಿಳಿದವನು ತನ್ನ ಕಣ್ಣುಗಳಿಂದ ನೋಡುತ್ತಾನೆ. ನಂಬುವವನು ಕನ್ನಡಕದ ಮೂಲಕ ನೋಡುತ್ತಾನೆ. (ಜರ್ಮನಿ)

*ಸಂಗ್ರಹ:* **ದಯಾನಂದ**, ವಕೀಲರು

# ಮಹಾಕುಂಭ ಪ್ರವಾಸ

**ಸಿ. ಬಿ. ಶ್ರೀನಿವಾಸನ್**

**ಹಿಂದಿನ ಸಂಚಿಕೆಯಿಂದ**

ಮತ್ತೆ ದೋಣಿ ಪ್ರವಾಸ ಮುಂದುವರೆಸಿ ಗಂಗಾನದಿಯ ಪೂರ್ವ ತೀರ ಸೇರಿದುದಾಯಿತು. ಇನ್ನೂ ಅಸ್ತಂಗತ ಸೂರ್ಯನ ಬಿಸಿಲು ನದಿಯ ಮೇಲಿದ್ದಾಗಲೇ ಮರುಳು ದಂಡೆಯಿಂದ ನದಿ ಪ್ರವೇಶಿಸಿ ಗಂಗಾ ಸ್ನಾನಕ್ಕೆ ಇಳಿದೆ. ನಿಧಾನವಾಗಿ ಹರಿಯುತ್ತಿರುವ ಪ್ರವಾಹ, ಸೊಂಟದವರೆಗೂ ಏರುವಷ್ಟು ಆಳ. ಮಂಜಿನಷ್ಟು ತಣ್ಣನೆಯ ನೀರು, ಮೂರು ಸಲ ಮುಳುಗು ಹಾಕಿ ಬಂದು ದೋಣಿಯಲ್ಲಿ ಬಟ್ಟೆ ಬದಲಿಸುತ್ತಿದ್ದಂತೆ, ಶರೀರ ಬಹಳ ಲಘುವಾಗಿರಬಹುದೆಂದು ಶ್ರೀ ವಸಂತ್‌ಕುಮಾರ್ ಪ್ರಶ್ನಿಸಿದರು, ಹೌದೆಂದೆ. ತನಗೆ ಬಾಯಿಪಾಠವಾಗಿದ್ದ, ಇನ್ನೂ ಅನೇಕ ಘಾಟ್‌ಗಳ ಬಗ್ಗೆ, ವಿವರಣೆ ಕೊಟ್ಟ ಅಂಬಿಗ ಕಡೆಗೆ ಒಟ್ಟಾರೆ ವಾರಣಾಸಿ ಗಂಗೆಯ ಬಗ್ಗೆ ತನ್ನ ವೈಯಕ್ತಿಕ ಟೀಕೆಯನ್ನು ಪ್ರಕಟಿಸಿ ಹೇಳಿದ. ಹಿಂದಿನವರು ತಾವು ನಿರ್ಮಿಸಿದ ಘಾಟ್‌ಗಳ ಉಸ್ತುವಾರಿ ಮಾಡಿಕೊಂಡು ಅದರ ಪಕ್ಕದಲ್ಲೀ ತಾವೂ ವಾಸವಿರುತ್ತಾ, ಪ್ರತ್ಯಕ್ಷವಾಗಿ ಪ್ರದೇಶದ ಶುಚಿತ್ವ ಕಾಪಾಡಿಕೊಂಡು, ಸಂಪೂರ್ಣ ಪಾರಮಾರ್ಥಿಕ, ಜೀವನ ನಡೆಸಿದ ಇಹಕ್ಕೂ, ಪರಕ್ಕೂ ಒಳಿತನ್ನೇ ಅಪೇಕ್ಷಿಸಿದ ಜನಾಂಗವರ್ಗ. ಕಾಲ ಕಳೆದಂತೆ, ನಿವಾಸಗಳು ಬಾಡಿಗೆದಾರರ ವಶವಾಗಿ, ಮಾಲೀಕರು ಎಲ್ಲೋ ದೂರವಾಸಿಗಳಾಗಿ, ಈ ಸ್ಥಳದ ಬಗ್ಗೆ ನಿರುತ್ಸಾಹಿಗಳಾಗಿ ನಿಂತಾಗ, ಈಗಿನ ದುರವಸ್ಥೆ ಕಾಲಿಟ್ಟಿತು. ಬರಬರುತ್ತಾ ಈ ನಿವಾಸಗಳನ್ನೇ ಹೋಟೆಲ್‌ಗಳನ್ನಾಗಿಯೂ ಯಾತ್ರಾರ್ಥಿಗಳಿಗೆ ಛತ್ರಗಳನ್ನಾಗಿಯೂ ಮಾರ್ಪಡಿಸಿದಾಗ ಹೊಲಸು ಹೇಸಿಗೆಗಳಿಗೆ ಈ ಘಾಟ್‌ಗಳೇ ಕೇಂದ್ರ ಸ್ಥಾನಗಳಾದವು. ಸರ್ಕಾರದ ಆಡಳಿತದಾರರ ನಿರಾಸ್ಥೆ ಸ್ವಲ್ಪ ಸ್ವಲ್ಪವಾಗಿ ಗಂಗಾ ತೀರ ಮತ್ತು ಗಂಗಾ ನದಿಯೇ ಕಲುಷಿತಗೊಳ್ಳಲು ಕಾರಣವಾಯಿತು. ಗಂಗಾ ಶುದ್ಧೀಕರಣವೆಂಬ ಕಾರ್ಯಕ್ರಮವು ಆರಂಭ ಪೌರುಷಕ್ಕೆ ಸೀಮಿತವಾಗಿ, ಉದಾಸೀನತೆಯೇ ನಿರಂತರತೆ ಪಡೆದು, ತಾನು ತಾಯಿಯಂತೆ ಪೂಜಿಸುವ ಗಂಗೆ ಕಸದ ತೊಟ್ಟಿಯಂತಾಗುತ್ತಿರುವ ಬಗ್ಗೆ ಮಮ್ಮಲ ತನ್ನ ಸಂಕಟ ತೋರಿಕೊಂಡ, ಅವಿದ್ಯಾವಂತನಾದರೂ ವಿವೇಕಶಾಲಿಯಾದ ಈ ಅಂಬಿಗ.

ವಾರಣಾಸಿಯಲ್ಲಿ ಇನ್ನುಳಿದದ್ದು ಸಂಕಟ ವಿಮೋಚನ ಹನುಮಾನ್ ದೇವಾಲಯ ದರ್ಶನ. ವಿಶಾಲವಾದ ಈ ದೇವಾಲಯ ಶುಚಿತ್ವಕ್ಕೂ ವಿಶಾಲತೆಗೂ ಮಾದರಿ. ಎದುರು ಬದುರಾಗಿ ನಿಂತ ರಾಮಲಕ್ಷ್ಮಣ, ಸೀತಾ ವಿಗ್ರಹಗಳ ಮಂದಿರ ಮತ್ತು ಹನುಮಾನ್ ಮಂದಿರಗಳಲ್ಲಿ ಏಕಕಾಲಕ್ಕೆ ಪೂಜೆಯಾಗುತ್ತದೆ. ಪೂಜಾರಿಗಳ ಶ್ರದ್ಧೆ, ಎರಡು ಮಂದಿರಗಳವರ ಸಹಯೋಗ ಭಕ್ತರನ್ನು ಪರವಶರನ್ನಾಗಿಸುತ್ತದೆ. ಇಲ್ಲಿಯೂ ನಿತ್ಯ ಜಾತ್ರೆಯಂತೆ ಜನಸಂದಣಿ, ಸಮೀಪದಲ್ಲಿಯೇ ತುಳಸಿ ರಾಮಮಂದಿರ. ಸಂಪೂರ್ಣ ಅಮೃತ ಶಿಲೆಯ ಈ ಮಂದಿರದ ಸುತ್ತು ಗೋಡೆಗಳಲ್ಲಿ ತುಳಸಿ ರಾಮಾಯಣ ಕೆತ್ತಲಾಗಿದೆ. ಇದು ಆಧುನಿಕ ಕಟ್ಟಡ. ವಾಸ್ತುಶಿಲ್ಪಕ್ಕೆ ಮಾದರಿ. ಹತ್ತಿರದಲ್ಲೇ ಕವಾಯಿದುರ್ಗಿ ಗುಡಿ. ವಿಶಾಲವಾದ ಹೊರಾಂಗಣ, ಪ್ರಾಕಾರ, ಸುಂದರ ದುರ್ಗಿ ಪ್ರತಿಮೆ, ನಿತ್ಯ ಪೂಜೆ, ಸ್ಥಳೀಯ ಜನರಿಗೆ ನಿತ್ಯಾಕರ್ಷಿತ ಸ್ಥಳ.

### 6

ಬೆಂಗಳೂರು ನಾವು ಬಿಟ್ಟಾಗ ನಮಗೆ ದೊರೆತಿದ್ದ ಮಾಹಿತಿಯಂತೆ 6, 7, 8ನೇ ತಾರೀಕುಗಳಿಗೆ ನಮಗೆ ಅಲಹಾಬಾದಿನ ಹೋಟೆಲೊಂದರಲ್ಲಿ ಎರಡು ರೂಮುಗಳನ್ನು ಕಾದಿರಿಸಲಾಗಿತ್ತು. ಆದರೆ ವಾರಣಾಸಿ ಬಿಡುವ ಮೊದಲು ಅಲ್ಲಿಂದಲೇ ಬ್ಯಾಂಕ್ ಆಫ್ ಇಂಡಿಯಾ ಅಧಿಕಾರಿಗಳನ್ನು ಸಂಪರ್ಕಿಸಿದಾಗ ನಮಗೊಂದು ಸಂತಸದ ಸುದ್ದಿ ಕಾದಿತ್ತು. ಮಹಾಕುಂಭ ಮೇಳದ ಕೇಂದ್ರ, ಅಲಹಾಬಾದಿನಿಂದ 3-8 ಕಿ.ಮೀ ದೂರದಲ್ಲಿರುವ ತಾಣ. ಸಂಗಮವೂ ಅಷ್ಟೇ. ಅಲಹಾಬಾದಿನ ಹೋಟೆಲ್‌ನಿಂದ ಸಂಗಮಕ್ಕೆ ಹೋಗಿ ಬರಲು ವಾಹನ ಚಾಲನೆ ನಿಷೇಧ ಪ್ರದೇಶ. ಆದ್ದರಿಂದ ಎಲ್ಲೆಲ್ಲಿ ಹೋದರೂ ಪಾದಚಾರಿಗಳಾಗಿಯೇ ಹೋಗಬೇಕು. ಆದ್ದರಿಂದ, ಕುಂಭಮೇಳದ ನಡು ಪ್ರದೇಶದಲ್ಲೇ ಎರಡನೇ ಘಟಕದಲ್ಲಿ ಬ್ಯಾಂಕಿನ ಒಂದು ಶಾಖೆಯನ್ನೇ ತೆರೆಯಲಾಗಿತ್ತು. ಅದರ ಹಿಂಭಾಗದಲ್ಲಿ ಅತಿಥಿ ಗೃಹ ಅಳವಡಿಸಲಾಗಿತ್ತು. ಸುತ್ತಲೂ ಜಿಂಕ್ ಷೀಟುಗಳನ್ನು ಸುಮಾರು 12 ಅಡಿ ಎತ್ತರಕ್ಕೆ ನಿಲ್ಲಿಸಿ, ಅದರ ಹೊರ ಮತ್ತು ಒಳ ಭಾಗಗಳಲ್ಲಿ ನೀರಿಳಿಯದ ಗಟ್ಟಿ ಹೊದಿಕೆಗಳನ್ನು ಬೊಂಬಿನ ಕಟಕಟಗೆ ಹೊಂದಿಸಿ ಕಟ್ಟಲಾಗಿತ್ತು. ನೆಲದ ಮೇಲೆ ಒಂದು ವರಸೆ ಇಟ್ಟಿಗೆಗಳನ್ನು ಜೋಡಿಸಿ, ಅದರ ಮೇಲೆ ತೆಂಗಿನ ನಾರಿನ ನೆಲ ಹಾಸುಗಳನ್ನು ಹಾಸಲಾಗಿತ್ತು. ಸುಮಾರು 30 ಜನರಿಗೆ ಸೌಕರ್ಯ ಒದಗುವಂತೆ ಕೋಣೆಗಳಾಗಿ ವಿಭಾಗಿಸಿ, ಪ್ರತೀ ಕೋಣೆಯಲ್ಲೂ ಎರಡೆರಡು ನವಾರು ಪಟ್ಟಿ ಮಂಚಗಳು, ಅದರ ಮೇಲೆ ಸುಪ್ಪತ್ತಿಗೆ ಮತ್ತು ತಲೆದಿಂಬು, ಹೊದೆಯಲು ದಪ್ಪನೆಯ ರಜಾಯಿ ಹೊದಿಕೆ.

ಪ್ರತೀ ಕೋಣೆಗೂ ತಾತ್ಕಾಲಿಕ ಉಪಯೋಗಕ್ಕಾಗಿ ಸ್ನಾನ ಗೃಹ ಮತ್ತು ಟಾಯ್ಲೆಟ್ ವ್ಯವಸ್ಥೆ. ಇಪ್ಪತ್ತಾಲ್ಕು ಗಂಟೆಯೂ ಹರಿಯುವ ನಲ್ಲಿ ನೀರು ಒಂದೇ ಕೊರತೆಯೆಂದರೆ ಪ್ರತ್ಯೇಕ ಬಿಸಿ ನೀರಿನ ವ್ಯವಸ್ಥೆ ಇಲ್ಲದಿದು. ಸುತ್ತಮುತ್ತ ಮೇಳದ ಉಪಹಾರದ ಗೃಹಗಳು. ಇಷ್ಟು ಸೌಕರ್ಯ ಸಿಕ್ಕಿದುದು ಒಂದು ದೆಸೆಯೆಂದೇ ಬಗೆದು ಹೇಗೋ ಸ್ಥಳ ಸೇರಿದೆವು. ಬ್ಯಾಂಕಿನ ಅಧಿಕಾರಿಗಳು ಆದರದಿಂದ ಬರಮಾಡಿಕೊಂಡರು. ಸುತ್ತಾಡಲು ಸಹಕಾರಕ್ಕಾಗಿ ಬ್ಯಾಂಕಿನ ಒಬ್ಬ ಹುಡುಗನನ್ನು ನೇಮಿಸಿದ್ದರು. ಸ್ಥಳಕ್ಕಾಗಿ ಇಲ್ಲಿಯೂ ಹುಡುಕಾಡ ಬೇಕಾದ ಜರೂರಿಲ್ಲದೇ ನೇರ ಮೇಳದ ಆಗುಹೋಗುಗಳಲ್ಲಿ ಭಾಗವಹಿಸಲು ಬದ್ಧರಾದೆವು. ಒಂದೇ ಸಾಲಿನಲ್ಲಿ ಅನೇಕ ಬ್ಯಾಂಕುಗಳವರು ಇದೇ ರೀತಿ ತಮ್ಮ ಶಾಖೆಗಳನ್ನು ತೆಗೆದಿರಿಸಿದ್ದು, ಅತಿಥಿ ಸೌಕರ್ಯ ಕಲ್ಪಿಸಿದ್ದರು. ಇವು ಬೇರೆ ಸ್ಥಳಗಳಲ್ಲಿದ್ದ ಟೆಂಟುಗಳಂತಲ್ಲ. ಚಳಿಗಾಲಕ್ಕೆ ಸಾಧ್ಯವಾದಷ್ಟು ಶೀತ ನಿರೋಧಕವಾಗಿದ್ದು, ನೋಡಲೂ ಅಲಂಕಾರಿಕ ಜೋಡಣೆಗಳನ್ನೊಳಗೊಂಡ ಬಹಳ ಅನುಕೂಲಕರ ತಂಗುದಾಣ. ಅನುಭವಕ್ಕೆ ಬಹಳ ಹೊಸದಾದರೂ ಸಂದರ್ಭಾನುಸಾರ ಅತ್ಯಾವಶ್ಯಕ ಸೌಕರ್ಯಗಳನ್ನು ಕೇವಲ ತಾತ್ಕಾಲಿಕ ಉಪಯೋಗಕ್ಕಾಗಿ ಸೃಷ್ಟಿಸಿದ ಅತಿಥಿ ಗೃಹಗಳು. ಸಂಗಮಕ್ಕೆ ಸಮೀಪವಾಗಿ, ಉಪಯುಕ್ತತೆಯಲ್ಲಿ ಸಾಧುವಾಗಿ ಇಲ್ಲಿ ಕಳೆದ ಕಾಲವೊಂದು ಸ್ಮರಣೀಯ ಅನುಭವ. ಇನ್ನು ಈ ಪ್ರವಾಸದ ಮುಖ್ಯ ವಿಷಯವಾದ ಮಹಾಕುಂಭದಲ್ಲಿ ಮಾಘ ಮಾಸದ ಹುಣ್ಣಿಮೆಯ ಷಾಹಿ ಸ್ನಾನ ಅಥವಾ ಧಾರ್ಮಿಕ ಸ್ನಾನದ ಬಗ್ಗೆ ಕಣ್ಣಾರೆ ಕಂಡುದುದನ್ನು ನೆನಪಿಸಿಕೊಳ್ಳಲೇಬೇಕು.

ಮೊದಲನೆಯದು : ಸಾರ್ವಜನಿಕರ ಪ್ರತಿಕ್ರಿಯೆ 6ನೇ ತಾರೀಕು ಮಧ್ಯಾಹ್ನ 12ರ ವೇಳೆಗೆ ನಾವು ತಂಗುದಾಣ ಸೇರುವಾಗ ಪಕ್ಕದ ಡಾಂಬರ್ ರಸ್ತೆಯಲ್ಲಿನ ಜನಸಂದಣಿ ನಮ್ಮ ಗಮನ ಸೆಳೆದಿತ್ತು. ರಸ್ತೆಯ ಒಂದು ಬದಿಯಲ್ಲಿ ಸಂಗಮದ ಕಡೆ ಧಾವಿಸುತ್ತಿದ್ದ ಜನರ ಸಾಲುಗಟ್ಟಿದ ನಡೆದಾಟ. ಸಾಲಿಂದಲೇ 5-6 ಜನರು ಪಕ್ಕ ಪಕ್ಕದಲ್ಲೇ ನಡೆಯುತ್ತಾ ಚಲಿಸುತ್ತಿರುವ ಓಡಲು ಸಜ್ಜಾಗುವ, ಮೊದಲು ದಾಪುಗಾಲು ಹಾಕಿ ಮುನ್ನಡೆಯುವ ವೇಗ. ಇನ್ನೊಂದು ಬದಿಯಲ್ಲಿ ಸಂಗಮದಿಂದ ಹಿಂದಿರುಗುತ್ತಿದ್ದ ಇದೇ ರೀತಿಯ ಜನಸಂದಣಿ. ಊರು ಮಾಹಿತಿ ಪಡೆಯದವರಿಗೆ, ಇವರೆಲ್ಲ ಎಲ್ಲಿಗೆ ಓಡಿ ಹೋಗುತ್ತಿದ್ದಾರೆ ಎಂದು ಕೇಳಲು ಕುತೂಹಲ ಉಂಟಾಗುವ ನಡೆ. ತೀವ್ರಗತಿಯಲ್ಲೂ ಅದೇನು ಶಾಂತಿ, ಶಿಸ್ತು, ಸೈನಿಕರಂತೆ ತಮ್ಮ ಮುಂದಿನ ಕೆಲಸದಲ್ಲಷ್ಟೇ ತನ್ಮಯತೆ ಇಟ್ಟು ಮುನ್ನಡೆ ಹಾಕುವ ಪಥಚಲನ. ಈ ಜನರ ಗುಂಪಿನ ಬಗ್ಗೆ ತಿಳಿಯಲೇ ಬೇಕು. ಉಟ್ಟ ಬಟ್ಟೆಯಲ್ಲೇ ಪ್ಯಾಂಟುಧಾರಿಗಳು, ಧೋತ್ರೆ ಉಟ್ಟವರು, ಸೂಟುಧಾರಿಗಳು, ವಿಶೇಷ ಪೋಷಾಕು ಧರಿಸಿದವರು, ಸ್ತ್ರೀ-ಪುರುಷರು, ಬಲಾಢ್ಯರು, ಅಂಗವಿಕಲರು, ಯುವಕರು, ಮುದಿಯರು, ಮಕ್ಕಳು, ಯಾವ ವಿಶೇಷಾಂಡಬರದ ಬಟ್ಟೆ ಬರೆ ತೊಡದೆ, ತಮ್ಮ ನಿತ್ಯ ಜೀವನದಲ್ಲಿ ತಾವು ಅಭ್ಯಾಸದಲ್ಲಿಟ್ಟಿರುವ ಧಿರಿಸುಗಳನ್ನೇ ಧರಿಸಿ, ಸಾಗುತ್ತಿದ್ದರು. ತೀವ್ರ ಛಳಿ ಕಾಲವಾದ ಈಗ ಬೆಚ್ಚನೆಯ ಸ್ವೆಟರ್, ಸ್ಕಾರ್ಫ್, ಮಂಕಿ ಕ್ಯಾಪ್‌ಗಳಲ್ಲದೇ ಶಾಲು ಹೊದ್ದವರು, ಕಂಬಳಿ ಹೊದ್ದವರೇ ಗುಂಪುಗುಂಪಾಗಿ ಹೋಗುವುದು ಈ ರೀತಿ ಹೋಗುವುದು ಒಂದು ವಿಚಿತ್ರ. ಗುಂಪಿನಲ್ಲಿ ಬಡವರು, ಬಲ್ಲಿದರು, ರೈತರು, ಉದ್ಯೋಗಸ್ಥರು, ವಣಿಕರು, ಕಲಿತವರು, ಕಲಿಯದವರು ಏನೇನು ಮಾತು ಚರ್ಚೆಗಳತ್ತ ಗಮನ ಹರಿಸದೆ. ಒಂದೇ ಸಮನೆ ಸಾಗುತ್ತಿದ್ದ ಈ ಜನಸ್ತೋಮದ ಗುರಿ ಗಂಗಾ-ಯಮುನಾ ಸರಸ್ವತಿ ಸಂಗಮಗಳ ಆ ಕೇಂದ್ರವೆಂದಾಗ ಊಹೆಗೂ ಒಂದು ಸಮಸ್ಯೆ ಉದ್ಭವಿಸುತ್ತದೆ. ತಿಳಿದೊ ತಿಳಿಯದೆಯೋ ಜಲಸ್ನಾನಕ್ಕಾಗಿ ಹೋಗುತ್ತಿರುವ ಈ ಜನ ತಮ್ಮ ಬಟ್ಟೆ-ಬರೆಗಳ ಬಗ್ಗೆ ಏನು ಯೋಚಿಸುತ್ತಿದ್ದಾರೆ. ಬದಲಿಕೆಗೆ ಮತ್ತೊಂದು ಬಟ್ಟೆ ಬೇಡವೆ? ಇದೆಲ್ಲ ಕೇವಲ.

ಸಂಶಯಪೀಡಿತರ ಮನಸ್ಥಿತಿ ಹೋಗುವುದು ಸಂಗಮಕ್ಕೆ, ಅದು ಈ ಅಮೃತ ಘಳಿಗೆಗಾಗಿ, ಜೀವನವೆಲ್ಲಾ ಸವೆಸಿದ್ದಾಗಿದೆ. 144 ವರ್ಷಗಳ ನಂತರ ಸಂಭವಿಸುವ ಈ ಅಮೃತ ಸೇಚನ ಗಂಗಾ-ಯುಮುನೆಯರ ಜಲಮಿಶ್ರಣದಲ್ಲಿ. ಇದಕ್ಕಾಗಿ ಯಾವ ಅನಾನುಕೂಲವೂ ಕಡ್ಡಾಯವಲ್ಲ. ವಯಸ್ಸು, ಅನಾರೋಗ್ಯ, ಅಸ್ವಾಸ್ಥ್ಯ, ನಿಶ್ಶಕ್ತಿ, ದೂರ ಸಂಸಾರದ ಒತ್ತಾಯಗಳು, ಚಳಿಗಾಲದ ಈ ನಿರುತ್ಸಾಹ, ಯಾವುದೂ ಏನೇನೂ ನೆಪವಾಗಿ ಪ್ರಯಾಣಕ್ಕೆ ಅಡ್ಡಿಯಾಗಲು ಒಪ್ಪದ ಮನೋಬಲ. ಸಾಧ್ಯವಾದಷ್ಟು ಸೌಕರ್ಯದ ಕಡೆ ಗಮನ ಬೇಕು. ಉಣ್ಣೆ ಬಟ್ಟೆ, ತ್ಯಾಜ್ಯವಲ್ಲ. ಹೋದ ಕಡೆ ಒಂದೆರಡು ದಿನ, ಬಹುಶಃ ನಾಲ್ಕಾರು ದಿನ, ಹೊಟ್ಟೆ ಪಾಡಿಗೆ ಏರ್ಪಾಡಾಗಬೇಕು. ಹಣವಿದ್ದವರು ಅಲ್ಲಲ್ಲಿ ದೊರೆಯುವ ಉಪಹಾರಗೃಹಗಳ ಭರವಸೆ ಇಟ್ಟು ಬರುತ್ತಾರೆ. ಇಲ್ಲದವರು ಮನೆಯಿಂದಲೇ ಪೂರಿ, ರೊಟ್ಟಿ, ಬಾಜಿ ಮತ್ತಿತರ ಖಾದ್ಯಗಳನ್ನು ಮಾಡಿಟ್ಟುಕೊಂಡು ತಲೆಯ ಮೇಲೆ ಹೊತ್ತು ಬರುತ್ತಾರೆ. ವಿಶ್ರಮಿಸಿಕೊಳ್ಳುತ್ತಾರೆ. ತಿಂದು ಮತ್ತೆ ಸಾಗುತ್ತಾರೆ. ಸಂಸಾರ ಸಮೇತ ಈ ರೀತಿ ಬೇರಾವ ಕಾರ್ಯಕ್ರಮಕ್ಕೂ ಜನ ಹೋಗರು. ವಿವಾಹ ಪತ್ರಿಕೆಗಳಲ್ಲಿ ಸಕುಟುಂಬ ಸಪರಿವಾರ ಸಮೇತರಾಗಿ ಆಗಮಿಸಬೇಕೆಂಬ ಆಹ್ವಾನ ಕೇವಲ ಡಾಂಭಿಕತೆ. ಕರೆಯುವವರೂ ಬಲ್ಲರು, (**ಮುಂದುವರಿಯುವುದು**)

## ಹಬ್ಬಗಳು

ಹಬ್ಬ ಒಂದು ಸಾಂಸ್ಕೃತಿಕ, ಜನಪದ ಆಚರಣೆ. ಆದರೆ ಹಲವು ಜಿಗುಟು ಸ್ವಭಾವದ ಮಂದಿ ಇವುಗಳಲ್ಲಿ ಸಲ್ಲದ ಆಚಾರ, ಆಚರಣೆ, ಪದ್ಧತಿಗಳನ್ನು ಅಳವಡಿಸಿ ಹಬ್ಬಕ್ಕೆ ಸಲ್ಲದ ಚೌಕಟ್ಟುಗಳನ್ನು ಹಾಕಿ, ಅದರ ಸಂತೋಷವನ್ನು, ವಿಶಿಷ್ಟತೆಯನ್ನು ಮಸುಕುಗೊಳಿಸುತ್ತಿದ್ದಾರೆ. ದೈನಂದಿನ ನಿತ್ಯ ಕೈಂಕರ್ಯಗಳ ನಿತ್ಯ ಯಾಂತ್ರಿಕತೆಯಿಂದ ಮಾನಸಿಕ ಹಾಗೂ ದೈಹಿಕವಾಗಿ ಬಿಡುಗಡೆಗೊಳ್ಳುವ, ನಾಲ್ಕು ಮಂದಿ ಒಂದೆಡೆ ಸೇರಿ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಾ, ಒಂದು ವಿಶೇಷ ಊಟವನ್ನೋ, ಸರಳ ಆಚರಣೆಯನ್ನೋ ಅನುಭವಿಸುವ ಒಂದು ಸುಂದರ ಕಲ್ಪನೆ 'ಹಬ್ಬ'.

ಹೆಚ್ಚು ಒತ್ತಡವಿಲ್ಲದೇ, ವೆಚ್ಚವಿಲ್ಲದೆ ಇತಿಮಿತಿಯಲ್ಲಿ ಸರಳವಾಗಿ ಸುಂದರವಾಗಿ ಹಬ್ಬವಾಚರಿಸಿದಲ್ಲಿ ಒಂದು ತೃಪ್ತಿ ಇರುತ್ತದೆ. ದೂರದೂರಿಂದ ಬರುವ ಮಗನೋ, ಮಗಳೋ, ಮೊಮ್ಮಕ್ಕಳೋ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೋ ಹಬ್ಬದ ಒಂದು ನೆಪದಲ್ಲಿ ಬಂಧುಗಳನ್ನು ನೋಡಲು ಬರುವ ಸಂತೋಷ, ಕಾತುರದಲ್ಲಿ ಮಮತೆಯ ಹಲವು ಮುಖಗಳನ್ನು ಕಾಣಿಸುವ ಕ್ರಿಯೆ ಹಬ್ಬದಲ್ಲಿನ ಒಂದು ವಿಶಿಷ್ಟ ಅಂಶ. ಹಬ್ಬವಾಚರಿಸೋಣ. ಸಂತೋಷ ಪಡೆಯೋಣ. ಗದ್ದಲ ಮಾಡುವುದು ಬೇಡ. ಅಬ್ಬರದ ಕೃತಕ ಹಬ್ಬ ಬೇಡ. ಕೆಲವೇ ಹಬ್ಬಗಳು ಅನಿವಾರ್ಯಗಳಾಗಿರಲಿ. ಪ್ರತಿಷ್ಠೆ ಗರ್ವಗಳ ಪ್ರದರ್ಶನವಾಗದಿರಲಿ. ಹಬ್ಬಗಳು ನಾಡು, ನುಡಿಯ ಕೀರ್ತಿ ವಿಶಿಷ್ಟತೆಗಳನ್ನು ಪ್ರತಿನಿಧಿಸುವಂತಿರಲಿ ಎಂಬುದೇ ಹಬ್ಬದ ಅರ್ಥ, ಸಾರ್ಥಕ್ಯ. ಆಷಾಢ ಕಳೆಯುತ್ತಿದ್ದಂತೆ ಹಬ್ಬಗಳು ಸಾಲುಸಾಲಾಗಿ ಬರುತ್ತಿರುತ್ತದೆ. ಭೀಮನ ಅಮಾವಾಸ್ಯೆಯಿಂದ ದೀಪಾವಳಿವರೆಗೆ ಹಬ್ಬಗಳ ಸಾಲುಸಾಲೇ ತಮ್ಮ ವೈಶಿಷ್ಟ್ಯತೆಗಳನ್ನು ಸಾರುತ್ತ ಆಚರಿಸಲ್ಪಡುತ್ತವೆ. ಎಂತಹ ಕಡು ಬಡತನದಲ್ಲೂ ಒಂದು ನಗೆಯ ರೇಖೆ ಮೂಡಿಸುವಂತಹ 'ಹಬ್ಬ'ಗಳು ಹೊರೆಯಾಗಬಾರದಷ್ಟೇ.

**ಜಿ. ಎಸ್. ನಟರಾಜನ್**, ವಕೀಲರು.

ಪ್ರಕಾಶಕರು ಲಹರಿ ವಕೀಲರ ವೇದಿಕೆ, ನಂ. 2980, ''ಲಕ್ಷ್ಮೀದೀಪ್'', 17ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070. ಮುದ್ರಕರು : ದಿ ಪ್ರಿಂಟಿಂಗ್ ಹೌಸ್, ಚಾಮರಾಜಪೇಟೆ, ಬೆಂಗಳೂರು-560 018. ದೂರವಾಣಿ :652 7770 ಸಂಪಾದಕರು : ಜಿ. ಎಸ್. ನಟರಾಜನ್, ಸಹ ಸಂಪಾದಕರು : ವಿ. ಎಸ್. ಮೂರ್ತಿ